ಸಂಪುಟವು 25-7-2000ದ ಸಭೆಯಲ್ಲಿ ಶ್ರೇಷ್ಠ ನ್ಯಾಯಾಲಯದ ತೀರ್ಪಿನ ಪರಿಣಾಮಗಳ ಬಗ್ಗೆ ಚರ್ಚಿಸಿ ಈ ವಿಷಯದ ಬಗ್ಗೆ ರಾಷ್ಟ್ರಪತಿಯವರ ಆದೇಶ ಪಡೆಯಲು, ತನ್ನ ಪ್ರಯತ್ನಗಳನ್ನು ಮುಂದುವರಿಸಲು ನಿರ್ಣಯಿಸಿತು. ಕರ್ನಾಟಕದ ಮುಖ್ಯ ನ್ಯಾಯಲಯದ ಮುಖ್ಯ ನ್ಯಾಯಾಧೀಶರು ಇತ್ತೀಚೆಗಷ್ಟೇ ತಮ್ಮ ಅಧಿಕಾರವನ್ನು ವಹಿಸಿಕೊಂಡಿದ್ದು ಕೇಂದ್ರ ಸರ್ಕಾರದ ಸಲಹೆಯಂತೆ ಸರ್ಕಾರವು ಈ ಬಗ್ಗೆ ಮತ್ತೊಮ್ಮೆ ಹೊಸದಾಗಿ ನೇಮಕಗೊಂಡಿರುವ ಮುಖ್ಯ ನ್ಯಾಯಾಧೀಶರೊಂದಿಗೆ ವ್ಯವಹರಿಸುತ್ತದೆ.

ತಾವು ಹೇಳಿದಹಾಗೆ ಹೊಸ ನ್ಯಾಯಧೀಶರು ಬಂದಿದ್ದಾರೆ. ಎಲ್ಲಾ ಒಟ್ಟಾಗಿ ಹೋಗಬೇಕೆಂದರೆ ಹೋಗೋಣ. ನಮಗೆ ಬಾಧಕವಾಗಿರುವುದು ನಮ್ಮ ಹಿರಿಯ ವಕೀಲರ ರಿಟ್ ಸುಪ್ರೀಂ ಕೋರ್ಟ್‌ನಲ್ಲಿ ತೀರ್ಮಾನವಾಗಿದ್ದು ಸ್ವಲ್ಪ ತಾಪತ್ರಯಕ್ಕೆ ಸಿಕ್ಕಿಹಾಕಿಕೊಳ್ಳಲು ಕಾರಣವಾಯಿತು. ಆದ್ದರಿಂದ ಈ ವಿಚಾರದಲ್ಲಿ ನಾವು ಒಟ್ಟಾಗಿ ಏನು ನಿರ್ಣಯ ಮಾಡಿದ್ದೇವೆ, ಅದು ಸದನದ ನಿರ್ಣಯ, ಸರ್ಕಾರದ ನಿರ್ಣಯ, ಪ್ರತಿಪಕ್ಷಗಳ ನಿರ್ಣಯ ಎಲ್ಲರೂ ಒಟ್ಟಾಗಿ ಸೇರಿರುವುದರಿಂದ ಆ ವಿಚಾರದಲ್ಲಿ ತಾವು ಯಾವ ಸಲಹೆ ಮತ್ತು ಮಾರ್ಗದರ್ಶನ ಮಾಡುತ್ತೀರೋ ಆ ಸಲಹೆಯಂತೆ ಸರ್ಕಾರ ನಡೆಯುತ್ತದೆ.

ಅಧ್ಯಕ್ಷರು :— ಈಗ ಮಾನ್ಯ ಮುಖ್ಯಮಂತ್ರಿಗಳು ಡಾ: ರಾಜ್ ಕುಮಾರ್ ವಿಷಯದಲ್ಲಿ ಒಂದು ಸ್ಟೇಟ್‌ಮೆಂಟ್ ಮಾಡುತ್ತಾರೆ.

5. ಮುಖ್ಯಮಂತ್ರಿಗಳ ಹೇಳಿಕೆ.

ವಿಷಯ: ಅಪಹೃತ ಡಾ: ರಾಜಕುಮಾರ್ ಬಿಡುಗಡೆ ಕುರಿತು.

+ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, ಡಾ: ರಾಜ್ ಕುಮಾರ್ ಅವರು ಸುರಕ್ಷಿತವಾಗಿ ಮತ್ತು ಆರೋಗ್ಯವಾಗಿ ಹಿಂತಿರುಗಿ ನಮ್ಮಲ್ಲಿಗೆ ಬಂದಿದ್ದಾರೆ. ಇದು ವೈಯಕ್ತಿಕವಾಗಿ ನನಗೆ ಮತ್ತು ರಾಜ್ಯದ ಎಲ್ಲಾ ಜನತೆಗೆ ಹರ್ಷ ತಂದಿದೆ. ಸರ್ಕಾರದ ಪರವಾಗಿ ನಿಮ್ಮೆಲ್ಲರ ಪರವಾಗಿ ಮತ್ತು ರಾಜ್ಯದ ಸಮಸ್ತ ಜನತೆಯ ಪರವಾಗಿ ಈ ಸಂದರ್ಭದಲ್ಲಿ ಡಾ: ರಾಜ್‌ಕುಮಾರ್ ಅವರ ಬಿಡುಗಡೆಯನ್ನು ಸಾಧ್ಯಗೊಳಿಸಿದ ಎಲ್ಲರಿಗೂ ಕೃತಜ್ಞತೆಗಳನ್ನು ಅರ್ಪಿಸಲು ನಾನು ಇಲ್ಲಿ ನಿಂತಿದ್ದೇನೆ.

ಡಾ: ರಾಜ್‌ಕುಮಾರ್‌ರವರು ಕಾಡುಗಳ್ಳನ ಬಂಧಿಯಾಗಿದ್ದಾಗ ನಾನು ಮೌನವಾಗಿ ಬಹಳಷ್ಟು ಟೀಕೆಗಳನ್ನು ಸಹಿಸಿದ್ದೇನೆ. ಆದರೆ ಈ ವಿಚಾರವಾಗಿ ಈಗ ನಿರ್ಭೀತಿಯಿಂದ ಮಾತನಾಡಬಯಸುತ್ತೇನೆ.

ಡಾ: ರಾಜ್‌ಕುಮಾರ್ ಅವರು ಇಂತಹ ವೇದನೆ ಮತ್ತು ಚಿತ್ರಹಿಂಸೆಗೆ ಒಳಗಾಗಬಾರದಿತ್ತು. ರಾಜ್ಯ ಸರ್ಕಾರ ಡಾ: ರಾಜ್ ಅವರನ್ನು ತಮ್ಮ ಚಲನವಲನದ

ಬಗ್ಗೆ ಮುಂಚಿತವಾಗಿಯೇ ಪೊಲೀಸರಿಗೆ ತಿಳಿಸಬೇಕೆಂದು ಕೋರಿಕೊಂಡಿದ್ದುದು ನಿಜ. ಆದರೆ ಅವರು ಎಂತಹ ಸರಳ ಮತ್ತು ಉದಾತ್ತ ವ್ಯಕ್ತಿಯೆಂದರೆ ಯಾರಾದರೂ ತಮಗೆ ಕೆಡಕುಂಟು ಮಾಡಬಹುದು ಅಥವಾ ವೇದನೆಗೊಳಪಡಿಸಬಹುದೆಂದು ಅವರೆಂದೂ ನಿರೀಕ್ಷಿಸಿರಲಿಲ್ಲ.

ನಮ್ಮಲ್ಲಿ ಯಾವಾಗಲೂ ಒಂದು ತಂತ್ರವಿತ್ತು. ಆ ತಂತ್ರದ ಎರಡು ಮುಖಗಳೆಂದರೆ (1) ನಾವು ಸಂಧಾನದ ಎಲ್ಲಾ ಸಾಧ್ಯತೆಗಳನ್ನು ಪೂರ್ಣಗೊಳಿಸಬೇಕು ಹಾಗೂ (2) ಡಾ: ರಾಜ್‌ಕುಮಾರ್ ಅವರು ಸುರಕ್ಷಿತವಾಗಿ ಹಿಂತಿರುಗಿ ಬರಬೇಕು.

ಅಪಹರಣದ ದಿನಗಳಲ್ಲಿ ಅನೇಕ ಟೀಕೆ ಟಿಪ್ಪಣಿಗಳು ಬಂದಾಗ್ಯೂ ನಾವು ಈ ತಂತ್ರಕ್ಕೇ ಅಂಟಿಕೊಂಡೆವು. ಈ ತಂತ್ರಕ್ಕೆ ರಾಜ್ಯದ ಎಲ್ಲಾ ರಾಜಕೀಯ ಪಕ್ಷಗಳ ಬೆಂಬಲವಿತ್ತು.

ಬಿಡುಗಡೆಗಾಗಿ ಔಪಚಾರಿಕ ಹಾಗೂ ಔಪಚಾರಿಕವಲ್ಲದ ಅನೇಕ ಸಂಧಾನ ಮಾರ್ಗಗಳನ್ನು ಜಾರಿಗೊಳಿಸಲಾಯಿತು. ಸಂಧಾನಕಾರರನ್ನು ಆರಿಸುವಲ್ಲಿ ಕರ್ನಾಟಕಕ್ಕೆ ಯಾವುದೇ ಆಯ್ಕೆಯ ಸ್ವಾತಂತ್ರ್ಯವಿರಲಿಲ್ಲ. ಏಕೆಂದರೆ ಡಾ: ರಾಜ್‌ಕುಮಾರ್ ಅವರನ್ನು ತಮಿಳುನಾಡಿನ ಪ್ರದೇಶದಿಂದ ಅಪಹರಣ ಮಾಡಲಾಗಿತ್ತು. ಈ ಅಂಶವನ್ನು ನಾವು ಅನೇಕ ಸಾರಿ ಮರೆಯುತ್ತೇವೆ.

ಅಪಹರಣದ ಅವಧಿಯಲ್ಲಿ ಡಾ: ರಾಜ್‌ಕುಮಾರ್ ಅವರ ಸುರಕ್ಷತೆ ಮತ್ತು ಶೀಘ್ರ ಬಿಡುಗಡೆಯ ಜೊತೆಗೆ ಸಾಮಾಜಿಕ ಶಾಂತಿ ಹಾಗೂ ಸಾಮರಸ್ಯ ಕಾಪಾಡುವುದು ಅವಶ್ಯಕವಾಗಿತ್ತು. ಸಂಕಷ್ಟದ ಅವಧಿಯುದ್ದಕ್ಕೂ ಇವುಗಳನ್ನು ನಾವು ಮರೆಯಲಿಲ್ಲ.

ಕಾಲಕಾಲಕ್ಕೆ ಕರ್ನಾಟಕ ಮತ್ತು ತಮಿಳುನಾಡು ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರದ ಆರೆ ಮಿಲಿಟರಿ ಪಡೆಗಳು ವೀರಪ್ಪನನ್ನು ಬಂಧಿಸಲು ನಡೆಸಿದ ಪ್ರಯತ್ನಗಳು ಸಂಪೂರ್ಣ ಸಫಲವಾಗಿಲ್ಲ. ಆದುದರಿಂದ ಡಾ: ರಾಜ್‌ಕುಮಾರ್ ಅವರನ್ನು ಬಿಡುಗಡೆಗೊಳಿಸಿ ವೀರಪ್ಪನನ್ನು ಬಂಧಿಸುವ ವಿಷಯದಲ್ಲಿ ಈ ಸರ್ಕಾರ ಕೈಗೊಂಡ ಕ್ರಮಗಳ ಮೇಲೆ ತೀರ್ಪು ನೀಡುವಾಗ ಈ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ಕೋರುತ್ತೇನೆ. (Therefore I plead for a sense of perspective and balance in judging the action taken by the Government in securing the release of Dr. Rajkumar and bringing Veerappan to book).

ಡಾ: ರಾಜ್‌ಕುಮಾರ್ ಬಿಡುಗಡೆಗೆ ಸಹಕರಿಸಿದ ಪ್ರಧಾನ ಮಂತ್ರಿಯವರು, ಕೇಂದ್ರ ಗೃಹ ಮಂತ್ರಿಯವರು ಹಾಗೂ ತಮಿಳು ನಾಡು ಮುಖ್ಯಮಂತ್ರಿಯವರ ಪಾತ್ರವನ್ನು ಇಲ್ಲಿ ಸ್ಮರಿಸಲು ಬಯಸುತ್ತೇನೆ.

ಡಾ: ರಾಜ್‌ಕುಮಾರ್ ಅವರನ್ನು ಬಿಡುಗಡೆಗೊಳಿಸಲು ಶ್ರಮಿಸಿದ ಎಲ್ಲಾ ಸಂಧಾನಕಾರರಿಗೂ ನನ್ನ ಕೃತಜ್ಞತೆಗಳು. ಆದರೂ ಅವರ ರಾಜಕೀಯ ಅಥವಾ ರಾಜಕೀಯ ಧೋರಣೆಯನ್ನು ನಾನು ಸಮರ್ಥಿಸಲಿಚ್ಛಿಸುವುದಿಲ್ಲವೆಂದು ಖಡಾಖಂಡಿತವಾಗಿ ಹೇಳಬಯಸುತ್ತೇನೆ. ಯಾವುದೇ ಭಯ ಅಥವಾ ಒಲವು ಇಲ್ಲದೆ ರಾಷ್ಟ್ರ ವಿರೋಧಿ ಶಕ್ತಿಗಳನ್ನು ಹತ್ತಿಕ್ಕುವುದು ನಮ್ಮ ಸರ್ಕಾರದ ದೃಢ ನಿಲುವಾಗಿದೆ.

ವ್ಯವಸ್ಥಿತ ಅಪರಾಧಗಳು ಮತ್ತು ಮಾಫಿಯ ಗುಂಪುಗಳ ಬೆಳವಣಿಗೆಯನ್ನು ಹತ್ತಿಕ್ಕಲು ಒಂದು ಹೊಸ ಶಾಸನವನ್ನು ಗೃಹ ಸಚಿವರು ಸಧ್ಯದಲ್ಲೇ ಶಾಸನ ಸಭೆಯಲ್ಲಿ ತರುವವರಿದ್ದಾರೆ. ಈಮಸೂದೆಗೆ ಒಪ್ಪಿಗೆ ನೀಡಿ ಕಾನೂನು ಮತ್ತು ಸುವ್ಯವಸ್ಥೆಯ ಯಂತ್ರವನ್ನು ಬಲಯುತಗೊಳಿಸಲು ನಮಗೆ ಅಧಿಕಾರ ನೀಡುವಂತೆ ತಮ್ಮನ್ನು ಕೋರುತ್ತೇನೆ.

ಈ ಸಂದರ್ಭದಲ್ಲಿ ನಾನು ರಾಜ್ಯದ 5.5 ಕೋಟಿ ಪ್ರಜೆಗಳಿಗೆ ವೀರಪ್ಪನ್‌ನನ್ನು ಬಂಧಿಸುವ ಸರ್ಕಾರದ ದೃಢ ನಿಲುವನ್ನು ಸದನದ ಮುಖಾಂತರ ಸ್ಪಷ್ಟಪಡಿಸಲುಬಯಸುತ್ತೇನೆ. ಇದಕ್ಕಾಗಿ ವಿಶೇಷ ಕಾರ್ಯಾಚರಣೆ ಪಡೆಯನ್ನು ಚುರುಕುಗೊಳಿಸಿ ಅದಕ್ಕೆ ಪೂರ್ಣ ಅಧಿಕಾರವನ್ನು ಕೊಡಲಾಗುವುದು.

ಡಾ: ರಾಜ್‌ಕುಮಾರ್ ಬಂಧನದಲ್ಲಿ ಇದ್ದ 108 ದಿನಗಳ ಅವಧಿಯಲ್ಲಿ ಸರ್ಕಾರ ಕೈಗೊಂಡ ಕ್ರಮಗಳಲ್ಲಿ ಮುಖ್ಯವಾದವುಗಳನ್ನು ಸಂಕ್ಷಿಪ್ತವಾಗಿ ಹಾಗೂ ಕ್ರಮವಾಗಿ ಹೇಳುವುದು ಇಲ್ಲಿ ಅವಶ್ಯಕವಾಗಿದೆ.

ಕಾಡುಗಳ್ಳ ವೀರಪ್ಪನ್ ಮತ್ತು ಅವನ ಸಹಚರರಿಂದ ಡಾ: ರಾಜ್‌ಕುಮಾರ್ ಅವರ ಅಪಹರಣದ ಬಗ್ಗೆ ಒಂದು ಟಿಪ್ಪಣಿ:

1. ತಮಿಳುನಾಡಿನ ತಾಳವಾಡಿ ಪೊಲೀಸ್ ಠಾಣೆಯ ಸರಹದ್ದಿನ ದೊಡ್ಡ ಗಾಜನೂರಿನಲ್ಲಿ ಡಾ: ರಾಜ್‌ಕುಮಾರ್ ಮತ್ತು ಅವರ ಕುಟುಂಬ ವರ್ಗದವರು ಇರುವಾಗ, ವೀರಪ್ಪನ್ ಮತ್ತು ಅವನ ತಂಡ ಅಲ್ಲಿಗೆ ದಾಳಿ ನಡೆಸಿ ಅವರನ್ನು ಮತ್ತು ಅವರ ಜತೆಯಲ್ಲಿದ್ದ ಅವರ ಅಳಿಯ ಗೋವಿಂದರಾಜು ಮತ್ತು ನಾಗಪ್ಪ ಹಾಗೂ ನಾಗೇಶ್ ಎಂಬುವವರನ್ನು ದಿನಾಂಕ 30-7-2000ರ ರಾತ್ರಿ ಸುಮಾರು 9.30 ಗಂಟೆ ಸಮಯದಲ್ಲಿ ಅಪಹರಿಸಿತ್ತು.

2. ಅಪಹರಣದ ಸಮಯದಲ್ಲಿ ವೀರಪ್ಪನ್ ರಾಜಕುಮಾರ್ ಅವರ ಪತ್ನಿ ಶ್ರೀಮತಿ ಪಾರ್ವತಮ್ಮನವರಿಗೆ ಒಂದು ಆಡಿಯೋ ಕ್ಯಾಸೆಟ್ ನೀಡಿ ತನ್ನ

ಜೊತೆಗೆ ಸಂಧಾನಕ್ಕೆ ಸಂಧಾನಕಾರರೊಬ್ಬರನ್ನು ಕಳುಹಿಸುವಂತೆಯೂ ಮತ್ತು ಅಪಹರಣಗೊಂಡಿರುವವರನ್ನು ರಕ್ಷಿಸಲು ಪೊಲೀಸ್ ಕಾರ್ಯಾಚರಣೆ ನಡೆಸಿದಲ್ಲಿ ಅವರ ಜೀವಕ್ಕೆ ಅಪಾಯ ಒದಗಬಹುದೆಂದು ಎಚ್ಚರಿಸಿರುತ್ತಾನೆ.

3. ಅಪಹರಣದ ಸುದ್ದಿ ತಿಳಿದ ಕೂಡಲೇ ಮಾನ್ಯ ಮುಖ್ಯಮಂತ್ರಿಗಳು ಹಿರಿಯ ಸಚಿವರ ಮತ್ತು ಅಧಿಕಾರಿಗಳ ಸಭೆ ನಡೆಸಿ ಚರ್ಚಿಸಿದರು. ಮತ್ತು ರಾಜ್‌ಕುಮಾರ್ ಕುಟುಂಬದವರ ಅಭಿಪ್ರಾಯವನ್ನೂ ತಿಳಿದುಕೊಳ್ಳಲಾಯಿತು. ಪೊಲೀಸ್ ಕಾರ್ಯಾಚರಣೆಯಿಂದ ರಾಜ್‌ಕುಮಾರ್ ಮತ್ತು ಇತರರಿಗೆ ಒದಗಬಹುದಾದ ಅಪಾಯವನ್ನು ಪರಿಗಣಿಸಿ ಸಂಧಾನವೇ ಲೇಸೆಂದು ತೀರ್ಮಾನಕ್ಕೆ ಬರಲಾಯಿತು. ಈ ಘಟನೆ ತಮಿಳುನಾಡು ರಾಜ್ಯದ ಒಳಗಡೆ ನಡೆದಿದ್ದು, ಈ ಸಂಬಂಧದಲ್ಲಿ ಎಲ್ಲಾ ತುರ್ತು ಕ್ರಮ ಕೈಗೊಳ್ಳಲು ಅವರನ್ನು ಒತ್ತಾಯಿಸುವ ಸಲುವಾಗಿ, ಮಾನ್ಯ ಮುಖ್ಯಮಂತ್ರಿಗಳು, ಗೃಹ ಮಂತ್ರಿಗಳು ಮತ್ತು ಹಿರಿಯ ಅಧಿಕಾರಿಗಳ ತಂಡ 31-7-2000 ರಂದು ಚೆನ್ನೈಗೆ ಹೋಗಿ ತಮಿಳುನಾಡು ಮುಖ್ಯಮಂತ್ರಿಗಳು ಮತ್ತು ಅಧಿಕಾರಿಗಳ ಜೊತೆ ಘಟನೆಯ ಬಗ್ಗೆ ಚರ್ಚಿಸಿ ರಾಜ್‌ಕುಮಾರ್ ಮತ್ತು ಅವರ ಸಹಚರರನ್ನು ಬಿಡುಗಡೆಗೊಳಿಸಲು ಎಲ್ಲಾ ಕ್ರಮ ಕೈಗೊಳ್ಳಬೇಕೆಂದು ಅವರನ್ನು ಒತ್ತಾಯಿಸಲಾಯಿತು. ಹಾಗೂ ಕರ್ನಾಟಕ ಸರ್ಕಾರ ಎಲ್ಲಾ ರೀತಿಯಲ್ಲಿ ಇವರಿಗೆ ಸಹಕಾರ ನೀಡುವುದಾಗಿಯೂ ಭರವಸೆ ನೀಡಲಾಯಿತು. ರಾಜ್‌ಕುಮಾರ್ ಅವರು ಸಮಸ್ತ ಕನ್ನಡಿಗರ ಗೌರವಾದರಗಳಿಗೆ ಪಾತ್ರರಾಗಿದ್ದು ಅವರಿಗೆ ಯಾವುದೇ ರೀತಿಯಲ್ಲಿ ಹಾನಿ ಉಂಟಾದಲ್ಲಿ ಅದರಿಂದ ಕರ್ನಾಟಕದಲ್ಲಿ ಕಾನೂನು ಭಂಗವಾಗುವ ಸಾಧ್ಯತೆಯಿದ್ದು ಅಗಾಧ ಪ್ರಮಾಣದ ಹಿಂಸೆ ಮತ್ತು ಸಾವು ನೋವುಗಳಿಗೆ ಕಾರಣವಾಗಬಹುದು ಎಂಬುದನ್ನು ಸಹಾ ತಮಿಳುನಾಡು ಮುಖ್ಯಮಂತ್ರಿಗಳಿಗೆ ಒತ್ತಿ ಹೇಳಲಾಯಿತು. ಚರ್ಚೆಯ ನಂತರ ತಮಿಳುನಾಡು ಮುಖ್ಯಮಂತ್ರಿಯವರು ಸೂಚಿಸಿದ ಪ್ರಕಾರ ಹಿಂದಿನ ಅಪಹರಣಗಳಲ್ಲಿ ಸಂಧಾನಕಾರರಾಗಿದ್ದ ನಕ್ಕೀರನ್ ಪತ್ರಿಕೆಯ ಸಂಪಾದಕ ಗೋಪಾಲ್ ಅವರನ್ನು ಮತ್ತೆ ಸಂಧಾನಕಾರರಾಗಿ ಕಳುಹಿಸಿಕೊಡುವುದು ಸೂಕ್ತವೆಂದು ಭಾವಿಸಿ ಅವರನ್ನು ವೀರಪ್ಪನ್ ಜೊತೆ ಸಂಧಾನಕ್ಕಾಗಿ ಕಳುಹಿಸಿಕೊಡಲಾಯಿತು.

4. ಈ ಮಧ್ಯೆ ವೀರಪ್ಪನ್ ಬೇಡಿಕೆಗಳ ಬಗ್ಗೆ ತಮಿಳುನಾಡು ಸರ್ಕಾರಕ್ಕೆ ಮಾಹಿತಿ ತಲುಪಿ, ಈ ಬಗ್ಗೆ ಚೆನ್ನೈನಲ್ಲಿ, ಎರಡೂ ರಾಜ್ಯದ ಮುಖ್ಯಮಂತ್ರಿಗಳು 6.8.2000ರಂದು ಸಭೆ ಸೇರಿ ಚರ್ಚಿಸಿ ಕರ್ನಾಟಕಕ್ಕೆ ಸಂಬಂಧಿಸಿದ ಬೇಡಿಕೆಗಳ ಬಗ್ಗೆ ಈ ಕೆಳಕಂಡ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು.

ಕ್ರಮ ಸಂಖ್ಯೆ	ಬೇಡಿಕೆಗಳು	ರಾಜ್ಯ ಸರ್ಕಾರದ ಪ್ರತಿಕ್ರಿಯೆ
1.	ಕಾವೇರಿ ಟ್ರಿಬ್ಯೂನಲ್‌ನ ಮಧ್ಯಂತರ ಆದೇಶ ಪರಿಪಾಲನೆ ಮತ್ತು ವಿವಾದಕ್ಕೆ ಶಾಶ್ವತ ಪರಿಹಾರ.	ಪ್ರಧಾನಮಂತ್ರಿಯವರ ಅಧ್ಯಕ್ಷತೆಯಲ್ಲಿ ಕಾವೇರಿ ಟ್ರಿಬ್ಯೂನಲ್‌ನ ಮಧ್ಯಂತರ ಆದೇಶವನ್ನು ಜಾರಿ ಮಾಡಲು ಸ್ಪಷ್ಟಿಸಿರುವ ಕಾವೇರಿ ನದಿ ಪ್ರಾಧಿಕಾರವು ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತದೆ.
2.	1991ರ ಕಾವೇರಿ ಗಲಾಟೆಯಲ್ಲಿ ನೊಂದ ತಮಿಳರಿಗೆ ನ್ಯಾಯಯುತವಾದ ಪರಿಹಾರ ನೀಡಬೇಕು.	ಕಾವೇರಿ ಗಲಭೆಗಳಿಗೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯದ ಆದೇಶದ ಪ್ರಕಾರ ಕಾವೇರಿ ಗಲಭೆ ಪರಿಹಾರ ಪ್ರಾಧಿಕಾರವನ್ನು ನೇಮಕ ಮಾಡಲಾಗಿದೆ. ಪ್ರಾಧಿಕಾರವು ಕಾರ್ಯಪ್ರವೃತ್ತವಾಗಿದ್ದು ಅದರ ವರದಿ ಬಂದ ನಂತರ ಸರ್ವೋಚ್ಚ ನ್ಯಾಯಾಲಯದ ಆದೇಶದ ಪ್ರಕಾರ ಕ್ರಮ ತೆಗೆದುಕೊಳ್ಳಲಾಗುವುದು.
3.	ತಮಿಳನ್ನು ಹೆಚ್ಚುವರಿ ಆಡಳಿತ ಭಾಷೆಯಾಗಿ ಕರ್ನಾಟಕ ಸರ್ಕಾರ ಒಪ್ಪಿಕೊಳ್ಳಬೇಕು.	ಕೇಂದ್ರ ಸರ್ಕಾರದ ಸೂಚನೆಯಂತೆ, ರಾಜ್ಯದಲ್ಲಿ ಭಾಷಾ ಅಲ್ಪಸಂಖ್ಯಾತರು ಶೇ. 15ಕ್ಕಿಂತ ಹೆಚ್ಚಾಗಿರುವ ಪ್ರದೇಶಗಳಲ್ಲಿ ಸರ್ಕಾರಿ ನಿಯಮ, ಆದೇಶ ಮುಂತಾದವುಗಳನ್ನು ಆ ಭಾಷೆಯಲ್ಲೂ ಹೊರಡಿಸಬೇಕೆಂದು ದಿನಾಂಕ 20.5.1999 ರಂದು ಸರ್ಕಾರ ಆದೇಶಿಸಿದೆ.

4. ಬೆಂಗಳೂರಿನಲ್ಲಿ ತಿರುವಳ್ಳವರ್ ಅವರ ಪುತ್ಥಳಿಯನ್ನು ಅನಾವರಣ ಮಾಡಲು ಕೂಡಲೇ ಕ್ರಮ ಕೈಗೊಳ್ಳಬೇಕು.

ತಿರುವಳ್ಳವರ್ ಪುತ್ಥಳಿಯನ್ನು ಬೆಂಗಳೂರಿನಲ್ಲೂ, ಸರ್ವಜ್ಞನ ಪ್ರತಿಮೆಯನ್ನು ಚೆನ್ನೈನಲ್ಲೂ ಎರಡೂ ರಾಜ್ಯಗಳ ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ಅನಾವರಣ ಮಾಡಲಾಗುವುದು.

5. ಎರಡೂ ರಾಜ್ಯಗಳ ಟಾಸ್ಕ್ ಫೋರ್ಸ್‌ಗಳ ಮೇಲೆ ಮಾಡಿರುವ ಆಪಾದನೆಗಳ ಬಗೆಗೆ ನೇಮಿಸಲಾದ ಜಸ್ಟೀಸ್ ಸದಾಶಿವ ಕಮಿಷನ್ ಬಗೆಗೆ ಉಚ್ಚ ನ್ಯಾಯಾಲಯದ ತಡೆ ಆದೇಶ ತೆರವು ಮಾಡಲು ಕ್ರಮ ಕೈಗೊಳ್ಳಬೇಕು. ಕಮೀಷನ್‌ನ ವರದಿಯಂತೆ ಅತ್ಯಾಚಾರಕ್ಕೆ ಒಳಗಾದವರಿಗೆ ಪರಿಹಾರ ನೀಡಬೇಕು ಹಾಗೂ ತಪಿತಸ್ಥರು ಎಂದು ಪರಿಗಣಿಸಲಾದ ಪೊಲೀಸ್ ಅಧಿಕಾರಿಗಳನ್ನು ಶಿಕ್ಷಿಸಬೇಕು.

ಕರ್ನಾಟಕ ಸರ್ಕಾರವು ಜಸ್ಟೀಸ್ ಸದಾಶಿವ ಪ್ಯಾನೆಲ್ ಮೇಲೆ ಇರುವ ತಡೆಯಾಜ್ಞೆಯನ್ನು ತೆರವುಗೊಳಿಸಲು ಕ್ರಮ ತೆಗೆದುಕೊಳ್ಳುವುದು. ನಂತರ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಆದೇಶದ ಪ್ರಕಾರ ಪರಿಹಾರ ಮುಂತಾದವುಗಳ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.

6. ಕರ್ನಾಟಕದ ಜೈಲುಗಳಲ್ಲಿ ನರಳುತ್ತಿರುವ ಅಮಾಯಕರನ್ನು ಬಿಡುಗಡೆ ಮಾಡಬೇಕು.

ಕರ್ನಾಟಕದ ಜೈಲಿನಲ್ಲಿರುವ ಬಂಧಿಗಳ ಬಿಡುಗಡೆಗೆ ಅನುಕೂಲವಾಗುವಂತೆ ಟಾಡಾ ಛಾರ್ಜ್‌ಗಳನ್ನು ಕೂಡಲೇ ಕೈಬಿಡಲಾಗುವುದು.

7. ಕೊಲೆಯಾಗಿರುವ 9 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಸಂಸಾರಗಳಿಗೆ ಸಾಕಷ್ಟು ಪರಿಹಾರ ನೀಡಬೇಕು.

ವಿವರಗಳನ್ನು ಪಡೆದ ನಂತರ ಪರಿಹಾರ ನೀಡವುದನ್ನು ಸಹಾನುಭೂತಿಯಿಂದ ಪರಿಶೀಲಿಸಲಾಗುವುದು.

5. ಎರಡೂ ರಾಜ್ಯಗಳ ಪ್ರತಿಕ್ರಿಯೆ ಬಗ್ಗೆ ಸಂಧಾನಕಾರರಾದ ಗೋಪಾಲ್ ಅವರು ವೀರಪ್ಪನ್ ಜೊತೆ ಚರ್ಚಿಸಿ ಹಿಂದುರುಗಿದ ನಂತರ ವೀರಪ್ಪನ್ ಎತ್ತಿರುವ ಕೆಲವು ಅಂಶಗಳನ್ನು ಚರ್ಚಿಸಲು ಎರಡೂ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ಚೆನ್ನೈನಲ್ಲಿ ದಿನಾಂಕ: 11.8.2000 ರಂದು ನಡೆಯಿತು. ಈ ಸಭೆಯಲ್ಲಿ ಚರ್ಚಿಸಲಾದ ಮುಖ್ಯ ಅಂಶಗಳ ಬಗ್ಗೆ ಸಂಕ್ಷಿಪ್ತ ವಿವರಣೆ ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಬೇಡಿಕೆಗಳು	ಸರ್ಕಾರದ ಪ್ರಕ್ರಿಯೆ
1.	ಕಾವೇರಿ ವ್ಯವಹಾರದ ಬಗ್ಗೆ ಶಾಶ್ವತ ಪರಿಹಾರ ಕಂಡುಹಿಡಿಯಲು ಸ್ವತಂತ್ರವಾಗಿ ಕೇಂದ್ರ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಹಾಗೂ ಈ ವಿಷಯದಲ್ಲಿ ತಮಿಳುನಾಡು ಸರ್ಕಾರಕ್ಕೆ ಅಂತರರಾಷ್ಟ್ರೀಯ ನ್ಯಾಯಾಲಯಕ್ಕೆ ಪರಿಹಾರಕ್ಕಾಗಿ ಹೋಗುವ ಹಕ್ಕು ಇರಬೇಕು.	ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಈಗಾಗಲೇ ಪ್ರಾಧಿಕಾರದ ರಚನೆಯಾಗಿದೆ. ಆದ್ದರಿಂದ ಅಂತರ ರಾಷ್ಟ್ರೀಯ ನ್ಯಾಯಾಲಯಕ್ಕೆ ಹೋಗುವ ಪ್ರಶ್ನೆ ಉದ್ಭವಿಸುವುದಿಲ್ಲ.
2.	ಕಾವೇರಿ ಗಲಭೆಯಲ್ಲಿ ಪರಿಹಾರಕೊಡಲು ಬಹಳ ತಡವಾಗಿರುತ್ತದೆ. ಆದ್ದರಿಂದ ಸಂತ್ರಸ್ತರಿಗೆ ಪೂರ್ಣ ಪರಿಹಾರ ಪ್ರಾಣ ಕಳೆದುಕೊಂಡಿರುವ ಪ್ರಕರಣಗಳಲ್ಲಿ ರೂ. 10 ಲಕ್ಷಗಳ ಪರಿಹಾರ, ಉಳಿದ ಅಂಗವಿಕಲರಿಗೆ ರೂ. 5 ಲಕ್ಷ ಪರಿಹಾರವನ್ನು ಒಂದು ತಿಂಗಳೊಳಗಾಗಿ ನೀಡಬೇಕು.	ಕಾವೇರಿ ಗಲಭೆಗಳ ಬಗ್ಗೆ ಸರ್ಕಾರ ಈಗಾಗಲೇ ಪರಿಹಾರವನ್ನು ನೀಡಿರುತ್ತದೆ. ಇನ್ನೂ ಹೆಚ್ಚಿನ ಪರಿಹಾರದ ಬಗ್ಗೆ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಪ್ರಾಧಿಕಾರವನ್ನು ರಚಿಸಲಾಗಿದೆ.
	3. ತಮಿಳು ಜನರಿಗೂ ಕನ್ನಡಿಗರಿಗೆ ಸಮಾನವಾದ ಹಕ್ಕುಗಳನ್ನು ನೀಡಬೇಕು. ತಮಿಳು ರಾಜ್ಯದ ಎರಡನೇ ಭಾಷೆಯಾಗಿ ಮಾಡಬೇಕು.	ರಾಜ್ಯದ ಎಲ್ಲಾ ಪ್ರಜೆಗಳಿಗೂ ಸಮಾನ ಹಕ್ಕು ಇರುತ್ತದೆ. ತಮಿಳನ್ನು ರಾಜ್ಯದ ಎರಡನೇ ಭಾಷೆ ಮಾಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಕ್ರಮ ಸಂಖ್ಯೆ	ಬೇಡಿಕೆಗಳು	ಸರ್ಕಾರದ ಪ್ರತ್ರಿಯೆ
4.	ಸರ್ಕಾರಗಳು ಸದಾಶಿವ ಪ್ಯಾನೆಲ್ ವರದಿ ನಂತರ ಎನ್.ಹೆಚ್.ಆರ್.ಸಿ. ಆದೇಶದಂತೆ ಕ್ರಮ ತೆಗೆದುಕೊಳ್ಳಲು ಭರವಸೆ ಕೊಡಬೇಕು. ಅತ್ಯಾಚಾರಕ್ಕೆ ಒಳಗಾದವರಿಗೆ ರೂ. 10 ಲಕ್ಷ ಮತ್ತು ಉಳಿದ ಗಾಯಗೊಂಡವರಿಗೆ ರೂ. 5 ಲಕ್ಷ ಪರಿಹಾರ ಕೊಡಬೇಕು.	ಪ್ಯಾನೆಲ್ ವರದಿ ಹಾಗೂ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಆದೇಶ ಬಂದ ನಂತರ ಕೂಡಲೇ ಕ್ರಮ ತೆಗೆದುಕೊಳ್ಳಲಾಗುವುದು.
5.	ನ್ಯಾಯಾಲಯದಲ್ಲಿ ಬಿಡುಗಡೆಯಾಗಿರುವ 5 ಮಂದಿ ತಮಿಳರಿಗೆ ಪರಿಹಾರ ನೀಡಬೇಕು. ಕರ್ನಾಟಕ ರಾಜ್ಯದಲ್ಲಿರುವ ಟಾಡಾ ಬಂಧಿಗಳ ಬಗ್ಗೆ ಎಲ್ಲಾ ಪ್ರಕರಣಗಳನ್ನು ಹಿಂತೆಗೆದುಕೊಳ್ಳಬೇಕು.	1) ನ್ಯಾಯಾಲಯದಿಂದ ಬಿಡುಗಡೆಯಾಗಿರುವವರಿಗೆ ಪರಿಹಾರ ನೀಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. 2) 5 ಪ್ರಕರಣಗಳಲ್ಲಿ ಟಾಡಾ ಭಾಜೀಗಳನ್ನು ಕೈಬಿಡಲು ಸರ್ಕಾರ ಆದೇಶಿಸಿದೆ.
6.	ಕೋಲಾರ ಜಿಲ್ಲೆಯಲ್ಲಿ ಹಲ್ಲೆಗೊಳಗಾಗಿ ಮೃತರಾದ 7 ಮಂದಿ ದಲಿತರ ಕುಟುಂಬ ವರ್ಗದವರಿಗೆ ಪರಿಹಾರ ನೀಡಬೇಕು.	ಸರ್ಕಾರ ಈಗಾಗಲೇ ಪರಿಹಾರ ಹಾಗೂ ಪುನರ್ವಸತಿ ಕಾರ್ಯಗಳನ್ನು ಕೈಗೊಂಡಿದೆ.

6. ಎರಡೂ ರಾಜ್ಯಗಳ ಈ ಪ್ರತಿಕ್ರಿಯೆಯನ್ನು ವೀರಪ್ಪನ್ ಜೊತೆ ಚರ್ಚಿಸಿದ ಸಂಧಾನಕಾರ ಗೋಪಾಲ್ ಹಿಂತಿರುಗಿದ ನಂತರ ಎರಡೂ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ಚನ್ನೈನಲ್ಲಿ ದಿನಾಂಕ 25.8.2000 ರಂದು ನಡೆಯಿತು. ರಾಜಕುಮಾರ್ ಸುರಕ್ಷಿತ ಬಿಡುಗಡೆಗಾಗಿ ವೀರಪ್ಪನ್, ಕರ್ನಾಟಕಕ್ಕೆ ಸಂಬಂಧಿಸಿದಂತೆ ಟಾಡಾ ಬಂಧಿಗಳ ಮೇಲೆ ಹಾಕಿರುವ ಉಳಿದ ಕೇಸುಗಳನ್ನು ವಾಪಸ್ಸು ಪಡೆಯಬೇಕು ಹಾಗೂ ಸದಾಶಿವ ಪ್ಯಾನೆಲ್ ಆದೇಶವನ್ನು ಕೂಡಲೇ ಜಾರಿಗೊಳಿಸಬೇಕು ಎಂಬ ಷರತ್ತು ಹಾಕಿರುವ ಅಂಶಗಳನ್ನು ಸಂಧಾನಕಾರರು ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿ ಕರ್ನಾಟಕ ಮತ್ತು ತಮಿಳುನಾಡು ಸರ್ಕಾರಗಳು ತಲಾ 5 ಕೋಟಿ ರೂ. ತೊಡಗಿಸಿ ಒಂದು ನಿಧಿಯನ್ನು ಸ್ಥಾಪಿಸಿ 26.8.2000 ದಂದು ಆದೇಶ ಹೊರಡಿಸಲಾಯಿತು.

7. ಕರ್ನಾಟಕ ಸರ್ಕಾರವು ಡಾ: ರಾಜಕುಮಾರ್ ಹಾಗೂ ಇತರರ ಸುರಕ್ಷಿತ ಬಿಡುಗಡೆಯ ಅವಶ್ಯಕತೆಯನ್ನು ಮನಗಂಡು ಹಾಗೂ ಅವರ ಬಿಡುಗಡೆಯಾಗದಿದ್ದಲ್ಲಿ ಉದ್ಭವಿಸಬಹುದಾದ ಅಗಾಧ ಪ್ರಮಾಣದ ಕಾನೂನು ಸುವ್ಯವಸ್ಥೆಯ ಸಮಸ್ಯೆಗಳನ್ನು ಮತ್ತು ಜನ ಜೀವನವು ಆರ್ಥಿಕವಾಗಿ ಹಾಗೂ ಇತರ ದೃಷ್ಟಿಗಳಿಂದ ಅಸ್ತವ್ಯಸ್ಥಗೊಳ್ಳುವ ಸಾಧ್ಯತೆಗಳನ್ನು ಮನಗಂಡು ಟಾಡಾ ಪ್ರಕರಣಗಳಲ್ಲಿ ಬಂಧಿತರಾದವರ ಹಾಗೂ ಜಾಮೀನನಲ್ಲಿರುವವರ ಮೇಲಿದ್ದ ಅಪಾದನೆಗಳನ್ನು ಹಿಂತೆಗೆದುಕೊಳ್ಳಲು ದಿನಾಂಕ 28.8.2000 ರಂದು ಕ್ರಮ ತೆಗೆದುಕೊಂಡಿತು. ಆದರೆ ಸರ್ವೋಚ್ಚ ನ್ಯಾಯಾಲಯವು ಈ ಸಂದರ್ಭದಲ್ಲಿ ದಿನಾಂಕ 29.8.2000ರಂದು ಆರೋಪಿಗಳನ್ನು ಬಿಡುಗಡೆ ಮಾಡದಂತೆ ಆದೇಶ ನೀಡಿದ್ದರಿಂದ ಈ ನಿರ್ಧಾರದ ಬಗ್ಗೆ ಮುಂದಿನ ಕ್ರಮ ತೆಗೆದುಕೊಳ್ಳಲಿಲ್ಲ.

8. ಬಿಡುಗಡೆಯ ಕ್ರಮಗಳ ಪ್ರಗತಿಯನ್ನು ಪರಿಶೀಲಿಸಲು ಎರಡೂ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ದಿನಾಂಕ 8.9.2000 ರಂದು ಬೆಂಗಳೂರಿನಲ್ಲಿ ನಡೆಯಿತು. ಈ ಸಭೆಯಲ್ಲಿ ಸಂಧಾನದ ಮೂಲಕವೇ ಬಿಡುಗಡೆಯ ಪ್ರಯತ್ನವನ್ನು ಮುಂದುವರೆಸಲು ತೀರ್ಮಾನಿಸಲಾಯಿತು. ಈ ಹಿನ್ನೆಲೆಯಲ್ಲಿ ತಮಿಳುನಾಡಿನ ಮುಖ್ಯಮಂತ್ರಿಗಳ ಜೊತೆಗೆ ದಿನಾಂಕ:18.9.2000 ರಂದು ರಾಜ್ಯ ಗೃಹ ಸಚಿವರು ಚರ್ಚೆ ನಡೆಸಿದರು.

9. ವೀರಪ್ಪನ್ ಮತ್ತು ಅವನ ತಂಡದವರ ಮೇಲೆ ದಾಖಲು ಮಾಡಿರುವ 5 ಟಾಡಾ ಕೇಸುಗಳಲ್ಲಿ ಇನ್ನೂ ಬಂಧನದಲ್ಲಿರುವ 51 ಮಂದಿ ಸೇರಿದಂತೆ ಆ 5 ಕೇಸುಗಳಲ್ಲಿನ ಎಲ್ಲಾ ಆರೋಪಿಗಳ ಮೇಲಿನ ಟಾಡಾ ಕಲಮುಗಳನ್ನು ಕೈ ಬಿಡಲು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸುವಂತೆ ದಿನಾಂಕ 8.8.2000ರಂದು ಸರ್ಕಾರವು ಆದೇಶಿಸಿತು.

ಟಾಡಾ ಡೆಸಿಗ್ನೇಟೆಡ್ ಕೋರ್ಟ್‌ನ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಅವರು ಅಪರಾಧಿಗಳ ಮೇಲಿನ ಟಾಡಾ ಆರೋಪಗಳನ್ನು ಹಿಂತೆಗೆದುಕೊಳ್ಳುವ ಬಗ್ಗೆ ಸಲ್ಲಿಸಿದ ಅರ್ಜಿಯನ್ನು ಪರಿಶೀಲಿಸಿ ಅವರ ಕೋರಿಕೆಯನ್ನು ನ್ಯಾಯಾಲಯವು ಒಪ್ಪಿ ದಿನಾಂಕ 19.8.2000ದಂದು ಆದೇಶ ನೀಡಿತು. ನಂತರ ಈ ಬಂಧಿಗಳು ಅವರ ಮೇಲೆ ಇರುವ ಐಪಿಸಿ ಕೇಸುಗಳಲ್ಲಿ ತಮಗೆ ಜಾಮೀನು ನೀಡಬೇಕೆಂದು ಅರ್ಜಿ ಸಲ್ಲಿಸಿದ್ದರು. ಈ ಜಾಮಿನಿಗೂ ಸಹಾ ನ್ಯಾಯಾಲಯವು ದಿನಾಂಕ 28.8. 2000 ರಂದು ಒಪ್ಪಿಗೆ ನೀಡಿರುತ್ತದೆ. ಶ್ರೀ ಅಬ್ದುಲ್ ಕರೀಂ ಎಂಬುವವರು ಟಾಡಾ ಪ್ರಕರಣವನ್ನು ಹಿಂತೆಗೆದುಕೊಳ್ಳುವ ವಿಷಯದಲ್ಲಿ ಸಲ್ಲಿಸಿದ ರಿಟ್ ಅರ್ಜಿಯನ್ನು ಪುರಸ್ಕರಿಸಿದ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಬಂಧಿಗಳ ಬಿಡುಗಡೆಗೆ ದಿನಾಂಕ 29.9.2000ರಂದು ತಡೆಯಾಜ್ಞೆ ನೀಡಿರುತ್ತದೆ. ಅಲ್ಲದೆ, ಇದೇ ವಿಷಯದಲ್ಲಿ ಡಾ: ವಥೇರ ಮತ್ತು ಆದರ್ಶ ಗಣೇಶ್ ಎಂಬ ಇಬ್ಬರು ಸಾರ್ವಜನಿಕ ಹಿತಾಸಕ್ತಿ ರಿಟ್ ಸಲ್ಲಿಸಿದ್ದು ಶ್ರೀ ಅಬ್ದುಲ್ ಕರೀಂ ಅರ್ಜಿಯಲ್ಲೂ ಮತ್ತು ಈ 2 ಸಾರ್ವಜನಿಕ ಹಿತಾಸಕ್ತಿ ರಿಟ್‌ಗಳಲ್ಲೂ ವಾದ ವಿವಾದಗಳು ಸರ್ವೋಚ್ಚ ನ್ಯಾಯಾಲಯದಲ್ಲಿ ನಡೆದವು. ಸರ್ವೋಚ್ಚ ನ್ಯಾಯಾಲಯವು ಈ 5 ಕೇಸುಗಳಲ್ಲಿ ಟಾಡಾ ಡೆಸಿಗ್ನೇಟೆಡ್ ನ್ಯಾಯಾಲಯವು ಟಾಡಾ ಛಾರ್ಜ್‌ಗಳನ್ನು ಕೈ ಬಿಡಲು ಸಮ್ಮತಿಸಿದ ಆದೇಶವನ್ನು ದಿನಾಂಕ: 7.11.2000ರಂದು ರದ್ದುಪಡಿಸಿತು. ಹಾಗೆಯೇ ನ್ಯಾಯಾಲಯ ಕೊಟ್ಟಿದ್ದ ಜಾಮೀನನ್ನೂ ರದ್ದುಪಡಿಸಿತು.

10. ಸರ್ಕಾರ ಈ ಪ್ರಕರಣದ ಬಗ್ಗೆ ಸರ್ವ ಪಕ್ಷಗಳ ನಾಯಕರ ಜೊತೆ ಪ್ರತಿ ಹಂತದಲ್ಲಿ ಸಮಾಲೋಚನೆ ನಡೆಸಿರುತ್ತದೆ. ಸಂಸತ್ ಸದಸ್ಯರು ಬುದ್ಧಿಜೀವಿಗಳು ಹಾಗೂ ಸಾರ್ವಜನಿಕ ಸಂಘ ಸಂಸ್ಥೆಗಳ ಜೊತೆ ಸಭೆ ನಡೆಸಲಾಯಿತು. ಈ ಸಭೆಗಳಲ್ಲಿ ಅಪಹರಣದ ಬಗ್ಗೆ ಪ್ರಸ್ತುತ ಪರಿಸ್ಥಿತಿ ಹಾಗೂ ಸರ್ಕಾರ ತೆಗೆದುಕೊಂಡ ನಿಲುವುಗಳನ್ನು ಸಭೆಗೆ ತಿಳಿಸಿ ಅದರ ಬಗ್ಗೆ ಎಲ್ಲಾ ಆಹ್ವಾನಿತರ ಸಲಹೆ ಪಡೆದಿರುತ್ತದೆ. ಅಲ್ಲದೆ ಈ ವಿಷಯದ ಗಂಭೀರತೆಯನ್ನು ಪರಿಗಣಿಸಿ ಎಲ್ಲರ ಸಹಕಾರವನ್ನು ಕೋರಲಾಗಿರುತ್ತದೆ. ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ನಾಯಕರುಗಳು ರಾಜ್‌ಕುಮಾರ್ ಅವರ ಸುರಕ್ಷಿತ ವಾಪಸಾತಿಯನ್ನು ಗಮನದಲ್ಲಿಟ್ಟು ಸರ್ಕಾರಕ್ಕೆ ಸಲಹೆ ಸೂಚನೆಗಳನ್ನು ಕೊಟ್ಟು ಸಂಪೂರ್ಣ ಸಹಕಾರ ಕೊಟ್ಟಿರುತ್ತಾರೆ.

11. ರಾಜ್ಯ ಸರ್ಕಾರ ಡಾ: ರಾಜ್‌ಕುಮಾರ್ ಅವರ ಸುರಕ್ಷಿತ ವಾಪಸಾತಿ ಅತ್ಯಂತ ಮುಖ್ಯವಾದುದು ಎಂದು ಪರಿಗಣಿಸಿರುತ್ತದೆ. ರಾಜ್ಯದಲ್ಲಿ, ಅದರಲ್ಲೂ ಬೆಂಗಳೂರು ಮತ್ತು ಇತರ ಕಡೆಗಳಲ್ಲಿ ಶಾಂತಿ ಮತ್ತು ಸೌಹಾರ್ದತೆಯಿಂದ ಎಲ್ಲಾ ವರ್ಗದ ಜನರು ಸಹಬಾಳ್ವೆ ನಡೆಸಿಕೊಂಡು ಬಂದಿರುತ್ತಾರೆ. ಇದು ಕರ್ನಾಟಕದ

ಹೆಗ್ಗಳಿಕೆಯಾಗಿರುತ್ತದೆ. ಇಂತಹ ಸೌಹಾರ್ದತೆ, ಸಹಬಾಳ್ವೆಗೆ ಡಾ: ರಾಜ್‌ಕುಮಾರ್ ಅವರ ಹಿಂದಿರುಗುವಿಕೆ ಅವಶ್ಯಕ. ಇದಕ್ಕೆ ಸಂಧಾನ ಮಾರ್ಗವೇ ಸೂಕ್ತ. ಪೊಲೀಸ್ ಕಾರ್ಯಾಚರಣೆಯಿಂದ ಬಿಡುಗಡೆ ಪ್ರಯತ್ನ ಮಾಡಿದರೆ ಅಚಾತುರ್ಯ ಆಗುವ ಸಂಭವವಿದೆ ಎಂಬುದನ್ನು ಮನಗಂಡು, ಪದೇ ಪದೇ ಸಂಧಾನ ಮಾರ್ಗಕ್ಕೆ ಸರ್ಕಾರ ಪ್ರಯತ್ನಿಸಿರುತ್ತದೆ.

12. ಸರ್ಕಾರ, ರಾಜ್‌ಕುಮಾರ್ ಅಪಹರಣದ ಬಗ್ಗೆ ಅವಶ್ಯವಾದರೆ ಪರ್ಯಾಯ ವ್ಯವಸ್ಥೆ ಮಾಡುವ ಬಗ್ಗೆಯೂ ಕೇಂದ್ರ ಸರ್ಕಾರದೊಂದಿಗೆ ವ್ಯವಹರಿಸಿರುತ್ತದೆ. ಮಾನ್ಯ ಮುಖ್ಯಮಂತ್ರಿಗಳು, ಪ್ರಧಾನ ಮಂತ್ರಿಗಳು ಮತ್ತು ಕೇಂದ್ರ ಗೃಹಮಂತ್ರಿಗಳ ಗಮನಕ್ಕೆ ಈ ವಿಷಯವನ್ನು ತಂದಿರುವುದಲ್ಲದೇ 10.10.2000 ದಂದು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿರುತ್ತಾರೆ. ಈ ಪತ್ರಕ್ಕೆ ಪ್ರಧಾನಿಗಳು 20.10.2000 ದಂದು ಉತ್ತರಿಸಿ ರಾಜ್ಯ ಸರ್ಕಾರಕ್ಕೆ ಈ ಸಂಬಂಧ ಬೇಕಾದ ಎಲ್ಲಾ ಸಹಾಯವನ್ನು ಒದಗಿಸುವುದಾಗಿ ಭರವಸೆ ನೀಡಿರುತ್ತಾರೆ.

13. ರಾಜ್ಯ ಸರ್ಕಾರಗಳು ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ವೀರಪ್ಪನ್‌ಗೆ ಒದಗಿಸಲು ಹಾಗೂ ಹೆಚ್ಚಿನ ಒತ್ತು ಕೊಡಲು ಪ್ರೊ. ಕಲ್ಯಾಣ್ ಮತ್ತು ಶ್ರೀ ಜೆ. ಸುಕುಮಾರನ್ ಇವರನ್ನು ಕರೆದುಕೊಂಡು ಹೋಗುವುದು ಸೂಕ್ತ ಎಂದು ತಮಿಳುನಾಡು ಸರ್ಕಾರ ತಿಳಿಸಿದುದರಿಂದ ರಾಜ್ಯ ಸರ್ಕಾರವು ಈ ಹಿನ್ನೆಲೆಯಲ್ಲಿ ಪ್ರೊ. ಕಲ್ಯಾಣ್. ಮತ್ತು ಶ್ರೀ ಸುಕುಮಾರನ್‌ರವರನ್ನು ಮುಂದಿನ ಸಂಧಾನಕ್ಕಾಗಿ ನಿಯಮಿಸಿಕೊಳ್ಳಿಸಲು ಸಹಮತಿ ವ್ಯಕ್ತಪಡಿಸಿದೆ.

14. ಡಾ: ರಾಜ್‌ಕುಮಾರ್ ಅವರ ಬಿಡುಗಡೆ ಬಹಳ ತಡವಾಗಿದ್ದು ಎಲ್ಲರಲ್ಲೂ ಕಳವಳವನ್ನು ಉಂಟು ಮಾಡುತ್ತು. ಇದರಿಂದಾಗಿ ರಾಜ್ಯ ಸರ್ಕಾರಗಳು ಕಳುಹಿಸಿದ ಸಂಧಾನಕಾರರಲ್ಲದೇ, ಇತರ ಅಸಕ್ತರೂ, ಸಂಘ ಸಂಸ್ಥೆಗಳು ಸ್ವಯಂಪ್ರೇರಿತರಾಗಿ ಬಿಡುಗಡೆಗಾಗಿ ಪ್ರಯತ್ನಗಳನ್ನು ಮಾಡಿರುತ್ತಾರೆ.

15. ರಾಜ್ಯ ಸರ್ಕಾರವು ರಾಜ್‌ಕುಮಾರ್ ಅವರ ಬಿಡುಗಡೆಯ ಸಮಯದಲ್ಲಿ ಕೊಟ್ಟಿರುವ ಆಶ್ವಾಸನೆಗಳನ್ನು ಕಾನೂನಿನ ಪ್ರಕಾರ ಮತ್ತು ಮಾನವೀಯತೆಯ ದೃಷ್ಟಿಯಿಂದ ಈಡೇರಿಸಲು ಸಿದ್ಧವಿದೆ. ಟಾಡಾ ಬಂಧಿಗಳ ಬಿಡುಗಡೆ ಬಗ್ಗೆ ರಚಿಸಿರುವ ಡಿಸ್ಕ್ರೀಷನರಿ ಕೋರ್ಟ್‌ಗೆ ಪ್ರತ್ಯೇಕ ನ್ಯಾಯಾಧೀಶರನ್ನು ನೇಮಿಸಲು ಮಾನ್ಯ ಉಚ್ಚ ನ್ಯಾಯಾಲಯವನ್ನು ಕೋರಿರುತ್ತದೆ. ಉಚ್ಚ ನ್ಯಾಯಾಲವು ಇದಕ್ಕೆ ಅನುಮತಿ ನೀಡಿ ಆದೇಶವನ್ನು ಹೊರಡಿಸಿರುತ್ತದೆ.

16. ಡಾ: ರಾಜ್‌ಕುಮಾರ್ ಬಿಡುಗಡೆಯಾದ ಹಿನ್ನೆಲೆಯಲ್ಲಿ ವೀರಪ್ಪನ್ ಮತ್ತು ಅವನ ಸಹಚರರನ್ನು ಬಂಧಿಸಲು ಮತ್ತು ಈ ಪಿಡುಗನ್ನು ಸಂಪೂರ್ಣವಾಗಿ ನಿರ್ಮೂಲ ಮಾಡಲು, ಅದಕ್ಕೆ ಬೇಕಾದ ಕಾರ್ಯಾಚರಣೆಗೆ ಸಂಬಂಧಿಸಿದಂತೆ ಈಗಾಗಲೇ ಎಲ್ಲ ಕ್ರಮಗಳನ್ನೂ ಪ್ರಾರಂಭಿಸಲಾಗಿದೆ. ತಮಿಳುನಾಡು ಸರ್ಕಾರದ ಮುಖ್ಯಮಂತ್ರಿಗಳು ಈ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳುವರೆಂದು ತಿಳಿದು ನನಗೆ ತುಂಬಾ ಸಂತೋಷವಾಗಿದೆ. ಎರಡೂ ರಾಜ್ಯ ಸರ್ಕಾರಗಳು ವೀರಪ್ಪನ್ ಮತ್ತು ಆತನ ಸಹಚರರನ್ನು ಬಂಧಿಸಲು ಸಮನ್ವಯದೊಂದಿಗೆ ಕ್ಷಿಪ್ರ ಕಾರ್ಯಾಚರಣೆಯಲ್ಲಿ ತೊಡಗಲಿದೆ. ಈ ಬಗ್ಗೆ ಕೇಂದ್ರ ಸರ್ಕಾರದೊಂದಿಗೆ ಚರ್ಚಿಸಿ ಬೇಕಾದ ಸಹಾಯವನ್ನು ಕೂಡ ಪಡೆಯಲಾಗುವುದು. ಈ ದಿಸೆಯಲ್ಲಿ ಕೇಂದ್ರ ಸರ್ಕಾರ ಹಾಗೂ ತಮಿಳುನಾಡು ಸರ್ಕಾರದ ಸಂಪೂರ್ಣ ಸಹಕಾರದೊಂದಿಗೆ ಕಾರ್ಯಾಚರಣೆ ನಡೆಸಲಾಗುವುದು.

17. ರಾಜ್ಯ ಸರ್ಕಾರ ಡಾ: ರಾಜ್‌ಕುಮಾರ್ ರವರ ವ್ಯಕ್ತಿತ್ವವನ್ನು ಗಮನದಲ್ಲಿಟ್ಟುಕೊಂಡು ಹಾಗೂ ರಾಜ್ಯದಲ್ಲಿ ಶಾಂತಿ ಕಾಪಾಡುವ ಅವಶ್ಯಕತೆಯನ್ನು ಗಮನಿಸಿ, ಅಲ್ಲದೇ ರಾಜ್ಯದ ಸಮಸ್ತ ಜನತೆ ಶಾಂತಿಯಿಂದ, ಸಹಬಾಳ್ವೆ ನಡೆಸಬೇಕೆಂಬ ಆಶಯದಿಂದ ಡಾ: ರಾಜ್ ಬಿಡುಗಡೆಗೆ ಅನಿವಾರ್ಯವಾಗಿ ಕೈಗೊಳ್ಳಬೇಕಾದ ಕೆಲವು ಕ್ರಮಗಳನ್ನು ತೆಗೆದುಕೊಂಡಿರುತ್ತದೆ. ಆದರೆ, ಈ ಕ್ರಮಗಳು ಯಾವುದೇ ವಿಚ್ಛಿದ್ರಕಾರಿ ಮತ್ತು ರಾಷ್ಟ್ರ ವಿರೋಧಿ ಚಟುವಟಿಕೆಗಳಿಗೆ ಒತ್ತಾಸೆಯಾಗಿರುವುದಿಲ್ಲ ಮತ್ತು ಇಂತಹ ಶಕ್ತಿಗಳನ್ನು ಸಂಪೂರ್ಣವಾಗಿ ದಮನ ಮಾಡುವುದು ನಮ್ಮ ಇಚ್ಛೆಯಾಗಿರುತ್ತದೆ. ಕರ್ನಾಟಕ ರಾಜ್ಯವನ್ನು ವಿಶೇಷವಾಗಿ ಕರ್ನಾಟಕದ ಕರಾವಳಿ ಜಿಲ್ಲೆಗಳು ಹಾಗೂ ಬೆಂಗಳೂರು ನಗರವನ್ನು ಯಾವುದೇ ಸಮಾಜ ವಿರೋಧಿ, ರಾಷ್ಟ್ರ ವಿರೋಧಿ ಭೂಗತ ಮಾಫಿಯಾ ಶಕ್ತಿಗಳಿಂದ ಮುಕ್ತಮಾಡಿಸಲು ರಾಜ್ಯ ಸರ್ಕಾರ ಬದ್ಧವಾಗಿದೆ. ಇಂತಹ ವಿಚ್ಛಿದ್ರಕಾರಿ ವ್ಯಕ್ತಿಗಳ ಚಟುವಟಿಕೆಗಳ ಬಗೆಗೆ ಸತತ ನಿಗಾ ವಹಿಸಿ ನಿರ್ದಾಕ್ಷಿಣ್ಯವಾಗಿ ಹತ್ತಿಕ್ಕಲಾಗುವುದು. ಈ ಬಗ್ಗೆ ರಾಜ್ಯ ಪೊಲೀಸರಿಗೆ ಸ್ಪಷ್ಟ ಸೂಚನೆ ನೀಡಲಾಗಿದ್ದು ಅವರು ಸದಾ ಸನ್ನದ್ಧರಾಗಿರಲು ಸೂಚಿಸಲಾಗಿದೆ.

18. ವೀರಪ್ಪನ್ ಮತ್ತು ಆತನ ಸಹಚರರನ್ನು ಬಂಧಿಸಲು ಎರಡೂ ರಾಜ್ಯ ಸರ್ಕಾರಗಳು ಕೈಗೊಳ್ಳಲಿರುವ ಕ್ರಮಗಳಿಗೆ ಭಾರತ ಸರ್ಕಾರ ಮುಂಜೂಕೆಯ ಪತ್ರ ವಿಸಿಸಬೇಕೆಂಬುದು ನಮ್ಮ ಬಯಕೆಯಾಗಿದೆ. ಈ ಸಮಸ್ಯ ಪರಿಹಾರಕ್ಕೆ ಕೇಂದ್ರ ಸರ್ಕಾರ ಈಗಾಗಲೇ ಮುಂದಾಗಿದ್ದು ಆಗತ್ಯ ನೆರವು ನೀಡುವ ಭರವಸೆಯಿತ್ತಿದೆ ಎಂದು ತಿಳಿಸಲು ನಾನು ಹರ್ಷಿಸುತ್ತೇನೆ. ಈ ನೆರವನ್ನು ಬಳಸಿಕೊಳ್ಳಲು ಬೇಕಾದ ಎಲ್ಲಾ ಕ್ರಮಗಳನ್ನೂ ನಮ್ಮ ಸರ್ಕಾರ ಕೈಗೊಳ್ಳುವುದು.

19. ಆದದ್ದು ಆಗಿ ಹೋಯಿತು. ನಾವಿಂದು ಭವಿಷ್ಯದತ್ತ ದೃಷ್ಟಿ ಹಾಯಿಸಬೇಕಾಗಿದೆ. ಈ ಘಟನೆಯಿಂದ ಸೂಕ್ತ ಪಾಠಗಳನ್ನು ಕಲಿಯಬೇಕಿದೆ. ಸಮಾಜ ಘಾತುಕರು ಮತ್ತು ರಾಷ್ಟ್ರ ವಿರೋಧಿ ವಿಚ್ಛಿದ್ರಕಾರಿ ಶಕ್ತಿಗಳು ಸಮಾಜದ ಸ್ವಾಸ್ಥ್ಯ ಹಾಗೂ ಸಮತೋಲನಕ್ಕೆ ಧಕ್ಕೆ ತಾರದಂತೆ ಎಚ್ಚರ ವಹಿಸಬೇಕಾಗಿದೆ.

20. ರಾಜ್ಯದ ರಾಜಧಾನಿ ಬೆಂಗಳೂರು ಹಾಗೂ ರಾಜ್ಯದಿಂದಲೇ ಸಮಾಜಘಾತುಕರನ್ನು ಹೊರದಬ್ಬುವುದು ನಮ್ಮ ಗುರಿ. ನಮಗೆ ಆ ಇಚ್ಛಾ ಶಕ್ತಿ ಇದೆ. ಹಾಗೂ ಇಂತಹ ದುಷ್ಟ ಶಕ್ತಿಗಳನ್ನು ಮಣಿಸುವ ನಿಟ್ಟಿನಲ್ಲಿ ನಮ್ಮೆಲ್ಲಾ ಬಲವನ್ನು ಬಳಸಿ ಯಶಸ್ವಿಯಾಗಿಯೇ ತೀರುತ್ತೇವೆಂದು ಈ ಸಂದರ್ಭದಲ್ಲಿ ಘೋಷಿಸಬಯಸುತ್ತೇನೆ.

21. ಕಡೆಯದಾಗಿ ರಾಜ್‌ಕುಮಾರ್ ಅವರ ಬಿಡುಗಡೆಯ ಪ್ರಯತ್ನದಲ್ಲಿ ಸರ್ಕಾರದೊಂದಿಗೆ ಸಂಪೂರ್ಣ ಸಹಕರಿಸಿರುವ ಮಾನ್ಯ ವಿರೋಧ ಪಕ್ಷದ ನಾಯಕರುಗಳು, ಕರ್ನಾಟಕದ ಜನತೆ, ತಮಿಳು ನಾಡು ಸರ್ಕಾರ ಮತ್ತು ಕೇಂದ್ರ ಸರ್ಕಾರಗಳಿಗೆ ಮತ್ತೊಮ್ಮೆ ಸರ್ಕಾರದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

"ಈ ದಿಸೆಯಲ್ಲಿ ಕೇಂದ್ರ ಸರ್ಕಾರ ಹಾಗೂ ತಮಿಳುನಾಡು ಸರ್ಕಾರದ ಸಂಪೂರ್ಣ ಸಹಕಾರದೊಂದಿಗೆ ನಮ್ಮ ರಾಜ್ಯದ ಕಾರ್ಯಚರಣೆಯ ಪಡೆಯನ್ನು ಕರ್ನಾಟಕ ರಾಜ್ಯ ಮೀಸಲು ಪಡೆಯ ಮುಖ್ಯಸ್ಥರು ಹಾಗೂ ದಕ್ಷ ಪೋಲೀಸ್ ಅಧಿಕಾರಿಯಾಗಿರುವ ಶ್ರೀ ಸಾಂಗ್ಲಿಯಾನ ಅವರ ನೇರ ಉಸ್ತುವಾರಿಯಲ್ಲಿ ಕಾರ್ಯ ನಿರ್ವಹಿಸಲು ತೊಡಗಿಸಲಾಗುವುದು" ನನ್ನ ಗಮನಕ್ಕೆ ಬಂದಿರತಕ್ಕಂಥದ್ದು ಈಗಾಗಲೇ ಸಾಂಗ್ಲಿಯಾನ ಅವರು ಆ ಭಾಗಕ್ಕೆ ಹೊರಟಿದ್ದಾರೆ ಎಂದು. "ರಾಜ್ಯ ಸರ್ಕಾರ ಡಾ: ರಾಜ್‌ಕುಮಾರ್‌ರವರ ವ್ಯಕ್ತಿತ್ವವನ್ನು ಗಮನದಲ್ಲಿಟ್ಟುಕೊಂಡು ಹಾಗೂ ರಾಜ್ಯದಲ್ಲಿ ಶಾಂತಿ ಕಾಪಾಡುವ ಅವಶ್ಯಕತೆಯನ್ನು ಗಮನಿಸಿ ಅಲ್ಲದೆ ರಾಜ್ಯದ ಸಮಸ್ತ ಜನತೆ ಶಾಂತಿಯಿಂದ ಸಹಬಾಳ್ವೆ ನಡೆಸಬೇಕೆಂಬ ಆಶಯದಿಂದ ಡಾ: ರಾಜ್ ಬಿಡುಗಡೆಗೆ ಅನಿವಾರ್ಯವಾಗಿ ಕೈಗೊಳ್ಳಬೇಕಾದ ಕೆಲವು ಕ್ರಮಗಳನ್ನು ಸರ್ಕಾರ ತೆಗೆದುಕೊಂಡಿರುತ್ತದೆ. ಆದರೆ, ಈ ಕ್ರಮಗಳು ಯಾವುದೇ ವಿಚ್ಛಿದ್ರಕಾರಿ ಮತ್ತು ರಾಷ್ಟ್ರ ವಿರೋದಿ ಚಟುವಟಿಕೆಗಳಿಗೆ ಒತ್ತಾಸೆಯಾಗಿರುವುದಿಲ್ಲ ಮತ್ತು ಇಂಥ ಶಕ್ತಿಗಳನ್ನು ಸಂಪೂರ್ಣವಾಗಿ ದಮನ ಮಾಡುವುದು ನಮ್ಮ ಇಚ್ಛೆಯಾಗಿರುತ್ತದೆ. ಕರ್ನಾಟಕ ರಾಜ್ಯವನ್ನು ವಿಶೇಷವಾಗಿ ಕರ್ನಾಟಕದ ಕರಾವಳಿ ಜಿಲ್ಲೆಗಳು ಹಾಗೂ ಬೆಂಗಳೂರು ನಗರವನ್ನು ಯಾವುದೇ ಸಮಾಜ ವಿರೋಧಿ, ರಾಷ್ಟ್ರ ವಿರೋಧಿ, ಭೂಗತ ಮಾಫಿಯಾ ಶಕ್ತಿಗಳಿಂದ ಮುಕ್ತಮನ್ನಾಗಿಸಲು ರಾಜ್ಯ ಸರ್ಕಾರ ಬದ್ಧವಾಗಿದೆ. ಇಂತಹ ವಿಚ್ಛಿದ್ರಕಾರಿ ವ್ಯಕ್ತಿಗಳ ಚಟುವಟಿಕೆಗಳ ಬಗ್ಗೆ ಸತತ ನಿಗಾ ವಹಿಸಿ ನಿರ್ದಾಕ್ಷಿಣ್ಯವಾಗಿ ಹತ್ತಿಕ್ಕಲಾಗುವುದು. ಈ ಬಗ್ಗೆ ರಾಜ್ಯ ಪೊಲೀಸರಿಗೆ ಸ್ಪಷ್ಟ ಸೂಚನೆ ನೀಡಲಾಗಿದ್ದು ಅವರು ಸದಾ

ಸನ್ನದರಾಗಿರಲು ಸೂಚಿಸಲಾಗಿದೆ. ವೀರಪ್ಪನ್ ಮತ್ತು ಆತನ ಸಹಚರರನ್ನು ಬಂಧಿಸಲು ಎರಡು ರಾಜ್ಯ ಸರ್ಕಾರಗಳು ಕೈಗೊಳ್ಳಲಿರುವ ಕ್ರಮಗಳಿಗೆ ಭಾರತ ಸರ್ಕಾರ ಮುಂಚೂಣಿಯ ಪಾತ್ರವನ್ನು ವಹಿಸಬೇಕೆಂದು ನಮ್ಮ ಬಯಕೆಯಾಗಿದೆ. ಈ ಸಮಸ್ಯ ಪರಿಹಾರಕ್ಕೆ ಕೇಂದ್ರ ಸರ್ಕಾರ ಈಗಾಗಲೇ ಮುಂದಾಗಿದ್ದು ಅಗತ್ಯ ನೆರವು ನೀಡುವ ಭರವಸೆ ಇತ್ತಿದೆ ಎಂದು ತಿಳಿಸಲು ನಾನು ಹರ್ಷಿಸುತ್ತೇನೆ. ಈ ನೆರವನ್ನು ಬಳಸಿಕೊಳ್ಳಲು ಬೇಕಾದ ಎಲ್ಲಾ ಕ್ರಮಗಳನ್ನು ನಮ್ಮ ಸರ್ಕಾರ ಕೈಗೊಳ್ಳುವುದು. ಆದದ್ದು ಆಗಿ ಹೋಯಿತು. ನಾವಿಂದು ಭವಿಷ್ಯದತ್ತ ದೃಷ್ಟಿ ಹಾಯಿಸಬೇಕಾಗಿದೆ. ಈ ಘಟನೆಯಿಂದ ಸೂಕ್ತ ಪಾಠಗಳನ್ನು ಕಲಿಯಬೇಕಿದೆ. ಸಮಾಜ ಘಾತುಕರು ಮತ್ತು ರಾಷ್ಟ್ರ ವಿರೋಧಿ, ವಿಚ್ಛಿದ್ರಕಾರಿ ಶಕ್ತಿಗಳು ಸಮಾಜದ ಸ್ವಾಸ್ಥ್ಯ ಹಾಗೂ ಸಮತೋಲನಕ್ಕೆ ಧಕ್ಕೆ ತಾರದಂತೆ ಎಚ್ಚರ ವಹಿಸಬೇಕಾಗಿದೆ. ರಾಜ್ಯದ ರಾಜಧಾನಿ ಬೆಂಗಳೂರು ಹಾಗೂ ರಾಜ್ಯದಿಂದಲೇ ಸಮಾಜ ಘಾತುಕರನ್ನು ಹೊರದಬ್ಬುವುದು ನಮ್ಮ ಗುರಿ. ನಮಗೆ ಆ ಇಚ್ಛಾ ಶಕ್ತಿ ಇದೆ. ಹಾಗೂ ಇಂಥ ದುಷ್ಟ ಶಕ್ತಿಗಳನ್ನು ಮಣಿಸುವ ನಿಟ್ಟಿನಲ್ಲಿ ನಮ್ಮೆಲ್ಲಾ ಬಲವನ್ನು ಬಳಸಿ ಯಶಸ್ವಿಯಾಗಿಯೇ ತೀರುತ್ತೇವೆಂದು ಈ ಸಂದರ್ಭದಲ್ಲಿ ಘೋಷಿಸಬಯಸುತ್ತೇನೆ. ಕಡೆಯದಾಗಿ ಡಾ: ರಾಜ್‌ಕುಮಾರ್ ಅವರ ಬಿಡುಗಡೆಯ ಪ್ರಯತ್ನದಲ್ಲಿ ಸರ್ಕಾರದೊಂದಿಗೆ ಸಂಪೂರ್ಣ ಸಹಕರಿಸಿದ ಮಾನ್ಯ ವಿರೋಧ ಪಕ್ಷದ ನಾಯಕರುಗಳು, ಕರ್ನಾಟಕದ ಜನತೆ, ತಮಿಳುನಾಡು ಸರ್ಕಾರ ಮತ್ತು ಕೇಂದ್ರ ಸರ್ಕಾರಗಳಿಗೆ ಮತ್ತೊಮ್ಮೆ ಸರ್ಕಾರದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ."

6. ನಿಯಮ 69ರ ಮೇರೆಗೆ.

(1) ಡಾ: ರಾಜ್‌ಕುಮಾರ್‌ರವರನ್ನು ಅಪಹರಿಸಿ ಬಿಡುಗಡೆಮಾಡಿದ್ದು ಇನ್ನು ಮುಂದೆ ಇಂತಹ ಪ್ರಕರಣಗಳು ನಡೆಯದಂತೆ ಕಾರ್ಯಾಚರಣೆ ಮಾಡಿ ಕಾಡುಗಳ್ಳ ವೀರಪ್ಪನ್‌ನ್ನು ಹಿಡಿಯುವುದರ ಬಗ್ಗೆ ಚರ್ಚೆ.

+ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :— ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಯನ್ನು ಇದೀಗತಾನೆ ನೋಡಿದೆವು. ಬಹುಶ: ಈ ಹೇಳಿಕೆಯಲ್ಲಿ ಹೊಸದೇನು ಇಲ್ಲ ಎಂದು ನನಗನಿಸುತ್ತಿದೆ. ಹಿಂದೆ ವೀರಪ್ಪನ್ ಮಾಡಿದಂಥ ಬೇಡಿಕೆಗಳು ಇರಬಹುದು, ಅದಕ್ಕೆ ಉತ್ತರ ಹಿಂದೆ ಎಲ್ಲಾ ನೀಡಿರುವಂಥದ್ದೇ ಆಗಿದೆ. ಇಲ್ಲಿ ಬಹು ಮುಖ್ಯವಾಗಿ ಇವತ್ತು ರಾಜ್‌ಕುಮಾರ್‌ರವರು ಸುರಕ್ಷಿತವಾಗಿ ಬಿಡುಗಡೆಯಾಗಿ ಬಂದಿದ್ದಾರೆ. ಅದಕ್ಕಾಗಿ ಯಾರ್‍ಯಾರು ಪ್ರಯತ್ನ ಮಾಡಿದ್ದಾರೆ, ಯಾರ್‍ಯಾರು ಅದರ ಜೊತೆಗೆ ಆ ಯಶಸ್ಸಿನಲ್ಲಿ ಭಾಗವಹಿಸಿದ್ದಾರೆ, ಅವರಿಗೆ ನಾವು ಅಭಿನಂದನೆಗಳನ್ನು ಹೇಳೋಣ. ಡಾ: ರಾಜ್‌ಕುಮಾರ್ ಬಿಡುಗಡೆಯಾಗುವವರೆಗೂ ಒಂದು ಘಟ್ಟ. ಬಿಡುಗಡೆಯಾದ ಮೇಲೆ ಮತ್ತೊಂದು ಘಟ್ಟ. ಬಿಡುಗಡೆಯಾಗುವ ಮುಂಚೆ ರಾಜ್ಯದಲ್ಲಿ ಯಾವ ರೀತಿಯ ಒಂದು